**ಪ್ರಧಾನ ಸಿವಿಲ್ ?ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ನ್ಯಾಯಾಲಯ, ಮದ್ದೂರು.**

**ಸಿ.ಮಿಸ್.74/2022**

ಸಾಕ್ಷಿದಾರರ ಹೆಸರು - ಎ.ಜಿ. ಸೌಮ್ಯ ಪ್ರಾ ಸಾ -1

ಗಂಡನ ಹೆಸರು - ಪ್ರಕಾಶ್

ವಯಸ್ಸು - 33 ವರ್ಷ

ಉದ್ಯೋಗ - ಏನು ಇಲ್ಲ

ವಾಸ ಸ್ಥಳ - ಅಜ್ಜಹಳ್ಳಿ ಗ್ರಾಮ

ದಿನಾಂಕಃ 20.06.2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಅರ್ಜಿದಾರರ ಪರ ಮಾನ್ಯ ಶ್ರೀಮತಿ ಕೆ.ಎಸ್.ಎನ್. ವಕೀಲರಿಂದ :**

ಎದುರುದಾರ ನನ್ನ ಗಂಡ. ಅವರು ಹುಚ್ಚಲಗೆರೆ ಊರಿನವರು. ದಿ.11.02.2016 ರಂದು ಶಿವ ಕನ್ವೆನ್ಷನ್ ಹಾಲ್ ನಲ್ಲಿ ನನ್ನ ಹಾಗೂ ಎದುರುದಾರರ ಮದುವೆಯಾಗಿರುತ್ತದೆ. ಮದುವೆ ಮಾತುಕತೆ ನನ್ನ ತಂದೆ-ತಾಯಿ ಮನೆಯಲ್ಲಿ ಆಗಿರುತ್ತದೆ. ಸದರಿ ಮಾತುಕತೆಗೆ ಸಣ್ಣೇಗೌಡ, ಜೈಕಾರ, ನನ್ನ ತಂದೆ-ತಾಯಿ, ಎದುರುದಾರರ ತಂದೆ-ತಾಯಿ, ಅಣ್ಣ ಹಾಗೂ ಎದುರುದಾರರು ಇದ್ದರು. 100 ಗ್ರಾಂ ಚಿನ್ನ, ಒಂದು ಬೈಕನ್ನು ಕೊಡಬೇಕೆಂದು ಮಾತುಕತೆ ಆಗಿರುತ್ತದೆ. ಮದುವೆಗೆ 8 ಲಕ್ಷ ರೂ.ಗಳನ್ನು ನನ್ನ ತಂದೆ-ತಾಯಿ ಖರ್ಚು ಮಾಡಿರುತ್ತಾರೆ.

ಮದುವೆಯಾದ ನಂತರ ನಾನು ಹುಚ್ಚಲಗೆರೆಯಲ್ಲಿ ನನ್ನ ಗಂಡನ ಮನೆಗೆ ಹೋಗಿರುತ್ತೇನೆ. 2 ವರ್ಷಗಳ ಕಾಲ ಚೆನ್ನಾಗಿ ನೋಡಿಕೊಂಡಿರುತ್ತಾರೆ. ಮಕ್ಕಳು ಆಗದ ಕಾರಣ ನನಗೆ ಬಹಳ ಕಿರುಕುಳ ನೀಡಿದರು. ನನ್ನ ಅತ್ತೆ, ಮಾವ ಮತ್ತು ಎದುರುದಾರರು ನಿನಗೆ ಮಕ್ಕಳಾಗಿಲ್ಲ,ಬಂಜೆ ನೀನು ಮನೆ ಬಿಟ್ಟು ಹೋಗು ಎಂದು ಹೇಳುತ್ತಿದ್ದರು. ನನಗೆ ಈ ಒತ್ತಡದಿಂದ ಸಕ್ಕರೆ ಕಾಯಿಲೆ ಬಂದಿರುತ್ತದೆ. ಆಗ ನಿನಗೆ ಷುಗರ್ ಇದೆ, ನಿಮ್ಮ ಮನೆಯಿಂದ ಹಣ,ಒಡವೆ ತೆಗೆದುಕೊಂಡು ಬಾ ಎಂದು ಹೇಳುತ್ತಿದ್ದರು. ನನಗೆ ಸಕ್ಕರೆ ಕಾಯಿಲೆ ಇದೆ ಎಂದು

ತಿಳಿದ ತಕ್ಷಣವೇ ಜಗಳ ಮಾಡಿ ನನ್ನನ್ನು ಮನೆಯಿಂದ ಹೊರಗೆ ಹಾಕಿರುತ್ತಾರೆ. ನಾನು ನನ್ನ ತಂದೆ-ತಾಯಿ ಮನೆಗೆ ಹೋಗಿರುತ್ತೇನೆ. 3 ವರ್ಷ ಅಲ್ಲೇ ಇದ್ದೆನು. ಆಗ ನನಗೆ ಮಂಡ್ಯ ನ್ಯಾಯಲಯದಿಂದ ಎದುರುದಾರರು ನೋಟೀಸ್ ಕಳುಹಿಸಿರುತ್ತಾರೆ. ನಾನು ನ್ಯಾಯಾಲಯಕ್ಕೆ ಹೋದಾಗ ನಾನು ಎದುರುದಾರರೊಂದಿಗೆ ವಾಪಸ್ ಹೋಗಲು ತಯಾರಿದ್ದು ನ್ಯಾಯಾಲಯ ಅವರೊಂದಿಗೆ ನನ್ನನ್ನು ಕಳುಹಿಸಿಕೊಟ್ಟಿರುತ್ತದೆ.

6 ತಿಂಗಳ ಕಾಲ ಎದುರುದಾರರ ಮನೆಯಲ್ಲಿ ಇದ್ದೆನು. ಆಗ ಅವರು ನನಗೆ ಹೊಡೆದು ಬಡೆದು ಬೇಗ ಡಿವೋರ್ಸ್ ಕೊಡು ನಾನು ಬೇರೆ ಮದುವೆ ಆಗಬೇಕು ಎಂದು ಹೇಳಿ ನನಗೆ ಊಟ ಬಟ್ಟೆ ಸರಿಯಾಗಿ ಕೊಡದೆ ಮನೆಯಲ್ಲಿ ಕೂಡಿ ಹಾಕಿ ಕಿರುಕುಳ ನೀಡಿರುತ್ತಾರೆ. ಈ ವಿಚಾರ ನನ್ನ ತವರು ಮನೆಗೆ ತಿಳಿದು ಅವರು ಪೊಲೀಸರಿಗೆ ದೂರು ನೀಡಿ ನನ್ನನ್ನು ಬಂದು ಕರೆದುಕೊಂಡು ಹೋದರು. ಆಗಿನಿಂದ ನಾನು ನನ್ನ ತಂದೆಯ ಮನೆಯಲ್ಲಿ ವಾಸವಾಗಿದ್ದೇನೆ. ಮಂಡ್ಯ ನ್ಯಾಯಾಲಯದಲ್ಲಿ ಎದುರುದಾರರು ಹೂಡಿದ್ದ ಎಂ.ಸಿ. 02/2021 ವಜಾ ಆಗಿರುತ್ತದೆ. ಎದುರುದಾರರು ನನ್ನನ್ನು ಅವರ ಮನೆಗೆ ಕರೆದುಕೊಂಡು ಹೋಗಿಲ್ಲ ಮತ್ತು ನನ್ನ ಜೀವನಕ್ಕೆ ಏನನ್ನೂ ಕೊಡುತ್ತಿಲ್ಲ. ನನ್ನ ತಂದೆ-ತಾಯಿಗೆ ವಯಸ್ಸಾಗಿದ್ದು ನನ್ನನ್ನು ನೋಡಿಕೊಳ್ಳಲು ಶಕ್ತಿ ಇಲ್ಲ. ಆದಕಾರಣ ನನ್ನ ಮಾತ್ರೆ ಔಷಧಿಗಳಿಗೆ ಮತ್ತು ಜೀವನ ನಿರ್ವಹಣೆಗೆ ನನಗೆ 25 ಸಾವಿರ ರೂ.ಗಳ ಖರ್ಚಾಗುತ್ತದೆ. ಎದುರುದಾರರಿಗೆ 3 ಎಕರೆ ಜಮೀನು ಇದ್ದು, ಸ್ವಂತ ಮನೆ, ಮೈಸೂರಿನಲ್ಲಿ 2 ಮನೆ, ರೇಷ್ಮೆ ಸಾಕಾಣೆ, ತೆಂಗಿನ ತೋಟ,ಎಳನೀರು ವ್ಯಾಪಾರ ಮಾಡುತ್ತಾರೆ. ಅವರಿಗೆ ತಿಂಗಳಿಗೆ 50,000 ರೂ.ಗಳ ಆದಾಯ ಇರುತ್ತದೆ. ಅವರಿಗೆ ಸಾಮರ್ಥ್ಯ ಇದ್ದರೂ ಸಹ ನನ್ನನ್ನು ಪೋಷಿಸಲು ನಿರ್ಲಕ್ಷಿಸಿರುತ್ತಾರೆ. ಎದುರುದಾರರು ಒಟ್ಟು ಕುಟುಂಬದಲ್ಲಿದ್ದು ಜಮೀನು ಅವರ ತಂದೆಯ ಹೆಸರಿನಲ್ಲಿರುತ್ತದೆ. ಎದುರುದಾರರ ಅಣ್ಣ ಸರ್ಕಾರಿ ಶಿಕ್ಷಕರು. ಮಧ್ಯಂತರ ಜೀವನಾಂಶವನ್ನೂ ಸಹ ಅವರು ನೀಡಿಲ್ಲ. ಆದ್ದರಿಂದ ನನ್ನ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೋರುತ್ತೇನೆ.

I have produced the following documents in support of my case and I have identified the same and they are marked as:

1. Wedding invitation as Ex.P.1
2. Wedding photograph as Ex. P.2.

3. Legal notice Dt. 05.03.2019 as Ex. P.3
4. Certified copy of ordersheet in MC 02/2021 as Ex.P.4
5. Certified copy of petition in MC 02/2021 as Ex.P.5
6. FIR in Cr. 12/2022 as Ex.P.6 and copy of complaint as Ex.P.6(a)
7. RTC Sy. No. 196 as Ex.P.7
8. RTC Sy. No. 178/2 as Ex.P.8
9. RTC Sy. No. 476/3 as Ex.P.9
10 RTC Sy. No. 207/6 as Ex.P.10
11. RTC Sy. No.205/5 as Ex.P.11
12. RTC Sy. No. 205/3 as Ex.P.12
13. RTC Sy. No. 178/1b as Ex.P.13

**ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)**

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಮದ್ದೂರು.

ಸಾಕ್ಷಿ ಸಹಿಃ